ಅವನ ಬರವನ್ನೇ ಕಾಯತೊಡಗಿದೆವು. ಒಬ್ಬರೂ ಇಂದು ಡಾಕ್ಟರರು ಬರುತ್ತಾರೋ ಇಲ್ಲವೋ ಎಂದು ಅನುಮಾನ ಕೂಡಾ ಸೂಚಿಸಲಿಲ್ಲ. ಅವನು ಬಂದಾಗ ನಮಗೆ ಉಸಿರು ಬಂದಂತಾಯಿತು. ಬಂದವನೇ ಅವನು, "ಇಂದು ನಾವು ಮ್ಯೂಸಿಕಲ್ ಚೇರ್ ಆಡೋಣ" ಎಂದು ಹೇಳಿದ. ಎಲ್ಲರೂ ಉತ್ಸಾಹದಿಂದ ಕುರ್ಚಿಗಳನ್ನು ಸುತ್ತ ಇಡುವುದರಲ್ಲಿ ಮಗ್ನರಾದೆವು. ಯಾರೂ ಡಾಕ್ಟರರ ಪರೀಕ್ಷಾಕೋಣೆಯ ಒಳಗೆ ನಮ್ಮನ್ನು ಬಿಡುವ ದರವಾನನ ಆಕ್ಷೇಪಣೆಗೆ ಸೊಪ್ಪುಹಾಕಲಿಲ್ಲ.

ಆಟ ಬಹಳ ಉತ್ಸಾಹದಿಂದ ಆರಂಭವಾಯಿತು. ಅವನು ಜೇಬಿನಿಂದ ಮೊಬೈಲ್ ತೆಗೆದು ಸಂಗೀತದ ಆ್ಯಪ್ ತೆರೆದು ಸಂಗೀತ ಹಾಕಿದ. ಎಲ್ಲರೂ ಸುತ್ತ ಇಟ್ಟ ಕುರ್ಚಿಯ ಹೊರ ಅಂಚಿನಲ್ಲಿ ತಿರುಗಲಾರಂಭಿಸಿದೆವು. ಸಂಗೀತ ನಿಲ್ಲಿಸಿದಾಗ ಎಲ್ಲರೂ ಒಂದೊಂದು ಕುರ್ಚಿಯ ಮೇಲೆ ಕೂತೆವು. ಒಬ್ಬನಿಗೆ ಕುರ್ಚಿ ಸಿಗಲಿಲ್ಲವಾದುದರಿಂದ ಅವನನ್ನು ಆಟದಿಂದ ಹೊರಗಿಟ್ಟೆವು. ಆ ಮೇಲೆ ಇನ್ನೊಂದು ಕುರ್ಚಿಯನ್ನು ಪಕ್ಕಕ್ಕೆ ಸರಿಸಬೇಕಾಗಿ ಬಂತು. ಪುನಃ ಸಂಗೀತ ಆರಂಭವಾಯಿತು. ಪುನಃ ನಾವು ಕುರ್ಚಿಯ ಸುತ್ತ ತಿರುಗಲಾರಂಭಿಸಿದೆವು. ಹೀಗೆ ಹತ್ತು ಹದಿನೈದು ಬಾರಿ ಆಯಿತು. ಹತ್ತು ಹದಿನೈದು ಜನರು ಆಟದಿಂದ ಹೊರಗೆ ಬಿದ್ದಿದ್ದರು. ಅಷ್ಟು ಕುರ್ಚಿಗಳು ಕಮ್ಮಿಯಾದುವು. ಪ್ರತೀಬಾರಿಯೂ ಒಬ್ಬ ಹೊರಗೆ ಬೀಳುತ್ತಿದ್ದ ಮತ್ತು ಒಂದು ಕುರ್ಚಿಯೂ ಕಮ್ಮಿಯಾಗುತ್ತಿತ್ತು. ಯಾರಿಗೂ ಇದೊಂದು ಆಸ್ಪತ್ರೆಯ ಪ್ರತೀಕ್ಷಾ ಕೊಠಡಿ ಎನ್ನುವ ಪರಿಕಲ್ಪನೆ ಹುಟ್ಟಲಿಲ್ಲ. ಯಾವುದೋ ಊರಿನ ಪ್ರಶಾಂತ ವಾತಾವರಣಕ್ಕೆ ಬಂದು ಅಲ್ಲಿಯ ಆಟದ ಮೈದಾನದಲ್ಲಿದ್ದೇವೆ ಎಂಬ ಭಾವನೆ ಬಂದಿತ್ತು.

ಅ ನಮ್ಮ ಹೀರೋ ಎಂಬ ವ್ಯಕ್ತಿ ಏದುಸಿರು ಬಿಡುತ್ತಿದ್ದ. ಯಾಕೆಂದರೆ ಅವನಿಗೆ ಎರಡೆರಡು ಕೆಲಸಗಳು ಇದ್ದುವಲ್ಲ. ಕುರ್ಚಿಯ ಸುತ್ತ ತಿರುಗಬೇಕು ಮತ್ತು ಸಂಗೀತವನ್ನೂ ಹಾಕಬೇಕು. ಆದರೆ ಧಡ್ ಎಂಬ ಸದ್ದಿನೊಡನೆ ಸಂಗೀತ ನಿಂತಿತು. ನಾವೆಲ್ಲ ಕುರ್ಚಿ ಹಿಡಿಯಲು ಓಡಿದೆವು. ನಮಗೆಲ್ಲರಿಗೂ ಕುರ್ಚಿ ಸಿಕ್ಕಿತ್ತು. ಎಲ್ಲರಿಗೆಂದರೆ ಎಲ್ಲರಿಗೂ. ಯಾಕೆಂದರೆ ಆ ವ್ಯಕ್ತಿ ನೆಲದ ಮೇಲೆ ಬಿದ್ದಿದ್ದ. ಬಿದ್ದದ್ದಷ್ಟೇ ಅಲ್ಲ, ಸತ್ತೇ ಹೋಗಿದ್ದ. ನಿಜವಾಗಿಯೂ ಸತ್ತಿದ್ದ.

ಬಹಳ ದಿನಗಳು ಕಳೆದಿವೆ. ಮಾರಣಾಂತಿಕವಾದ ರೋಗ ಈಗ ತಕ್ಕಮಟ್ಟಿಗೆ ತಹಬಂದಿಗೆ ಬಂದಿದೆ. ಸೆಖೆಗಾಲವೂ ಕಳೆದು ನಾಲ್ಕಾರು ಮಳೆಯೂ ಬಿದ್ದು ನೆಲದ ಮೇಲೆ ಹಸುರು ಕಾಣಿಸಿಕೊಂಡಿದೆ. ನಿಗೂಢವಾದ ರೋಗದಿಂದ ಮೊದಲು ಸತ್ತ ಆ ವ್ಯಕ್ತಿಯ ನೆನಪು ನಮಗೆಲ್ಲ ಆಗಾಗ ಆಗುತ್ತದೆ. ಅವನು ಹೇಳಿದ ಕತೆ, ಓದಿದ ಕವನ, ಶಬ್ದಬಂಡಿ, ಮ್ಯೂಸಿಕಲ್ ಚೇರ್ ಎಲ್ಲ ಮರುಕಳಿಸುತ್ತದೆ. ಶಬ್ದಬಂಡಿಯ ಸಾಲು ನೆನಪಾಗುತ್ತದೆ ಅಜ್ಞಾನ, ನಕ್ಷತ್ರ, ತ್ರಯೋದಶಿ, ಶಿಕಾರಿ, ರಿಕ್ಷಾ, ಕ್ಷತ್ರಿಯ, ಯಾದವ, ವಾಸ್ತವ, ವಂದೇಮಾತರಂ...


## ಗೋಪಾಲಕೃಷ್ಣ ಪೈ

ಕತೆಗಾರ, ಕಾದಂಬರಿಕಾರ ಹಾಗೂ ಅನುವಾದಕ ಪೈ ಕಾಸರಗೋಡಿನ ಪೆರ್ಲದವರು. 'ತಿರುವು', 'ಈ ಬೆರಳ ಗುರುತು', 'ಹಾರುವ ಹಕ್ಕಿಯ ಗೂಡಿನ ದಾರಿ' ಕಥಾಸಂಕಲನಗಳು. 'ಸ್ವಪ್ನ ಸಾರಸ್ವತ' ಕಾದಂಬರಿ. 'ಆಧುನಿಕ ಚೀನಿ ಸಣ್ಣಕತೆಗಳು', 'ಚೆಕೋವನ ಕೊನೆಯ ದಿನಗಳು', 'ಮೋಯಾನ್‌ನ ಕಥೆಗಳು', 'ಮಹಾತ್ಮನಿಗಾಗಿ ಕಾಯುತ್ತ' ಅನುವಾದಿತ ಪುಸ್ತಕಗಳು.